ಪ್ರಿಯ ಕನ್ನಡಿಗರೆ,

ಉತ್ತರ ಅಮೆರಿಕಾದಲ್ಲಿ ಸುಮಾರು ಅರವತ್ತು ಸಾವಿರಕ್ಕೂ ಹೆಚ್ಚು ಕರ್ನಾಟಕ ಜನರಿದ್ದಾರೆ. ಈ ಸಂಖ್ಯೆಯು ಬಹುವಾಗಿ ಪಶ್ಚಿಮ, ಪೂರ್ವ ಮತ್ತು ಮಧ್ಯ ದೇಶದಲ್ಲಿ ಕೇಂದ್ರೀಕೃತವಾಗಿದೆ. ಈ ಜನರು ಎಲ್ಲಾ ವಿಧವಾದ ಸಾಮಾಜಿಕ ಮತ್ತು ಆರ್ಥಿಕ ವಿಭಾಗದಿಂದ ಬಂದಿದ್ದಾರೆ. ಜಗತ್ತಿನಾದ್ಯಂತ ಅನೇಕ ವಾಣಿಜ್ಯ ನಗರಿಗಳಲ್ಲಿ ಕನ್ನಡಿಗರು ವಿಭಿನ್ನ ಕೆಲಸಗಳಲ್ಲಿ ತೊಡಗಿಕೊಂಡು ಜೀವನ ಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರೆಲ್ಲರನ್ನೂ ಒಂದು ವೇದಿಕೆಯಲ್ಲಿ ಸೇರಿಸಿ ಕನ್ನಡದ ಮುಂದಿನ ತಲೆಮಾರುಗಳು ಕನ್ನಡ ಸಾಹಿತ್ಯ, ಕಲೆ ಕೃತಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಉದ್ದೇಶ ಬಹು ಅಗತ್ಯ.

ಈ ಹಿನ್ನೆಲೆಯಿಂದ ವಿಶ್ವದ ಕನ್ನಡ ಮನಸ್ಸುಗಳನ್ನು ಒಂದು ಮಾಡುವ ದೃಷ್ಟಿಯಿಂದ ನಾವಿಕ (ನಾರ್ತ್ ಅಮೆರಿಕ ವಿಶ್ವ ಕನ್ನಡ ಆಗರ) ಎಂಬ ಒಂದು ವಿಶ್ವ ಕನ್ನಡ ಸಂಸ್ಥೆಯನ್ನು ಸ್ಥಾಪಿಸಲಾಗಿದೆ (www.navika.org). ಕನ್ನಡಗರಿಂದ ಕನ್ನಡಿಗರಿಗಾಗಿ ದುಡಿಯಬಲ್ಲ ಸಂಸ್ಥೆಗೆ ಬುನಾದಿ. ಮುಂದಿನ ಅಮೆರಿಕನ್ನಡ ಜನಾಂಗಕ್ಕೆ ಕನ್ನಡದ ಕಂಪನ್ನು ಉಳಿಸುವ, ಕನ್ನಡದ ಶಕ್ತಿಯನ್ನು ಬೆಳೆಸುವ ಈ ಸಂಸ್ಥೆ ಯಾವುದೇ ಬೇಧವಿಲ್ಲದ ಹಾಗೂ ಅಸ್ಥಿತ್ವವಾಗಿರುವ ಎಲ್ಲ ಕನ್ನಡ ಸಂಸ್ಥೆಗಳನ್ನು ಶ್ಲಾಘಿಸುವ ಸಂಸ್ಥೆಯಾಗಿದೆ.

ನಾವಿಕದ ಇತರ ಉದ್ದೇಶಗಳು ದಾನ ಧರ್ಮ ಕಾರ್ಯಗಳಲ್ಲಿ ತೊಡಗುವಿಕೆ, ಕರ್ನಾಟಕದ ಹಳ್ಳಿಗಳ ದತ್ತು ಸ್ವೀಕಾರ, ಅಮೆರಿಕೆಯಲ್ಲಿರುವ ಕರ್ನಾಟಕದ ಮೂಲ ವೃದ್ಧರಿಗೆ ವೃದ್ಧಾಶ್ರಮ ಯೋಜನೆ, ವೈದ್ಯಕೀಯ, ತಾಂತ್ರಿಕ ವಿಜ್ಞಾನ ಹಾಗೂ ಇತರೆ ವಿಭಾಗಗಳಲ್ಲಿನ ವಿದ್ಯಾರ್ಥಿಗಳ ವಿನಿಮಯ ಕಾರ್ಯಕ್ರಮ, ಕನ್ನಡ ಕಲಿಕೆ ಕಾರ್ಯಕ್ರಮ ಕೇಂದ್ರೀಕರಿಸುವ ಯೋಜನೆ ಹಾಗೂ ಅಮೆರಿಕೆಯಲ್ಲಿ ಒಂದು ಕನ್ನಡ ಸಂಸ್ಕೃತಿ ಕೇಂದ್ರದ ಸ್ಥಾಪನೆ.

ಈ ಉದ್ದೇಶಗಳನ್ನು ಈಡೇರಿಸುವ ದೃಷ್ಟಿಯಿಂದ ಮತ್ತು ಎಲ್ಲಾ ಕನ್ನಡಿಗರಿಗೆ ಪ್ರಚಾರಿಸಲು ನಾವಿಕ ಸಂಸ್ಥೆಯು 2010 ಜುಲೈ ತಿಂಗಳ 2,3 ಮತ್ತು 4 ರಂದು ಲಾಸ್ ಏಂಜಲಿಸ್ ನಗರದಲ್ಲಿ ಒಂದು ಅಮೋಘ ಕನ್ನಡ ಶಿಖರ ಸಮಾವೇಶವನ್ನು ಆಯೋಜಿಸಿದೆ. ಮೂರು ದಿನಗಳ ಈ ಸಮಾವೇಶವನ್ನು ಕರ್ನಾಟಕದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ. ಯಡ್ಡಿಯೂರಪ್ಪನವರು ಉದ್ಘಾಟಿಸಲು ಒಪ್ಪಿಕೊಂಡಿರುತ್ತಾರೆ. ಕ್ಯಾಲಿಫೋರ್ನಿಯಾದ ರಾಜ್ಯಪಾಲರಾದ ಮಾನ್ಯ ಶ್ರೀ. ಅರ್ನಾಲ್ಡ್ ಶ್ವಾಸ್ನೇಗರ್ ಅವರನ್ನು ಆಹ್ವಾನಿಸಲಾಗಿದೆ. ಕರ್ನಾಟಕದಿಂದ ೪೦ಕ್ಕೂ ಹೆಚ್ಚು ಕಲಾವಿದರ ತಂಡವೇ ಬರುತ್ತಿದೆ. ಅದಲ್ಲದೇ ಪ್ರಖ್ಯಾತ ಪತ್ರಕರ್ತರುಗಳಾದ ಶ್ರೀ. ವಿಶ್ವೇಶ್ವರ ಭಟ್ ಹಾಗೂ ಶ್ರೀ. ರವಿ ಬೆಳೆಗೆರೆ ಅವರೂ ಬರಲಿದ್ದಾರೆ. ಗೋಲ್ಡನ್ ಸ್ಟಾರ್ ಗಣೇಶ್ ಅವರು ಬಂದು ನಮ್ಮನ್ನೆಲ್ಲಾ ರಂಜಿಸಲಿದ್ದಾರೆ. ಉತ್ತರ ಕ್ಯಾಲಿಫೋರ್ನಿಯಾದ ಜನಪ್ರಿಯ ಆರ್ಕೇಸ್ಟ್ರಾ ತಂಡ 'ರಾಗ' ಚಲನಚಿತ್ರ ಗೀತೆಗಳಿಂದ ಮನರಂಜಿಸಲಿದೆ. ಹೊರನಾಡಿನ ಕನ್ನಡ ಕತೆಗಾರರು, ಕವಿಗಳು, ನಾಟಕಕಾರರು ಹಾಗೂ ಕಲಾವಿದರುಗಳನ್ನು ಕನ್ನಡದಲ್ಲಿ ತಯಾರಾದ ಉತ್ತಮ ಗುಣಮಟ್ಟದ ಚಲನಚಿತ್ರಗಳ ಉತ್ಸವ, ಮಹಿಳೆಯರನ್ನು ಎಲ್ಲಾ ಕಲೆಗಳು ಹಾಗೂ ಉದ್ಯಮದಲ್ಲಿ ಪಾಲ್ಗೊಳ್ಳುವಂತೆ (ಜಾಗೃತಿಕ) ಚರ್ಚಿಸುವ, ಯುವಶಕ್ತಿಯನ್ನು ನಾಳಿನ ಬದುಕಿಗೆ ಸಿದ್ಧಗೊಳಿಸುವ ಮತ್ತು ಅವರ ಪ್ರತಿಭಾ ಪ್ರದರ್ಶನ ವೇದಿಕೆ ..... ಹೀಗೆ ಹಲವಾರು ಕಾರ್ಯಕ್ರಮಗಳನ್ನು, ಹಮ್ಮಿಕೊಳ್ಳಲಾಗಿದೆ.

ದಯವಿಟ್ಟು ತಾವೆಲ್ಲರೂ ಈ ಅದ್ಭುತ ಸಮಾವೇಶದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿ.

ಇತಿ ತಮ್ಮ ವಿಶ್ವಾಸಿಗಳು,


ಡಾ|| ಶ್ರೀ ಅಯ್ಯಂಗಾರ್
**ಯೋಜಕರು ಹಾಗೂ**
**'ನಾವಿಕ' ಅಧ್ಯಕ್ಷರು**

ಡಾ|| ಜಿ ಎಮ್ ರಾಮಪ್ಪ
**ಯೋಜಕರು ಹಾಗೂ**
**'ನಾವಿಕ' ವಿಶ್ವಸ್ಥ ಮಂಡಳಿ ಅಧ್ಯಕ್ಷರು**

ವಲ್ಲೀಶ ಶಾಸ್ತ್ರಿ
**ಯೋಜಕರು ಹಾಗೂ**
**'ನಾವಿಕ' ಉಪಾಧ್ಯಕ್ಷರು**

ಚಂದ್ರಶೇಖರ್ ಬಿ
**ಯೋಜಕರು ಹಾಗೂ**
**'ನಾವಿಕ' ಕಾರ್ಯದರ್ಶಿಗಳು**

ವಿಜಯ್ ಕೊಟ್ರಪ್ಪ
**ಯೋಜಕರು ಹಾಗೂ**
**'ನಾವಿಕ' ಪದಾಧಿಕಾರಿಗಳು**